Sri R. CHENNIGARAMAIAH.—I do not think we have constructed houses for Rs. 2,500. The individuals entrust the construction of the houses to the Housing Board. They will have to give the Board Rs. 2,000 in advance and the other Rs. 8,000 will be given to them as loan.

Sri V. P. DEENADAYALU NAIDU.—How many houses were built during the last three years out of the loan received from the Centre?

Sri R. CHENNIGARAMAIAH.—1,227 houses.

ಶ್ರೀ ಆಲೂರು ಹನುಮಂತಪ್ಪ.—ಈ ವನತಿ ಸೌಕರ್ಯಕ್ಕೆ ಸಾಲವನ್ನು ಕೊಡುವಾಗ ಗ್ರಾಮಾಂತರ ಪ್ರದೇಶಗಳಿಗೆ ಕೊಡಲಿಕ್ಕೆ ಒಂದು ಅವಕಾಶವಿದೆಯೇ ಅಥವಾ ಪಟ್ಟಣವಾಸಿಗಳಿಗೆ ಮಾತ್ರವೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ಈಗಿರತಕ್ಕ ಸ್ಕೀಂ ಪ್ರಕಾರ ಪಟ್ಟಣದಲ್ಲಿ ಮತ್ತು ಟೌನ್‌ನಲ್ಲಿ ವಾಸಮಾಡತಕ್ಕವರಿಗೆ ಮಾತ್ರ ಅವಕಾಶವಿದೆ.

ಶ್ರೀ ಆಲೂರು ಹನುಮಂತಪ್ಪ.—ಕಡೆಯಪಕ್ಷ ತಾಲ್ಲೂಕು ಹೆಡ್‌ಕ್ವಾರ್ಟರುಗಳಿಗಾದರೂ ಇದರಲ್ಲಿ ಕೊಡಲಿಕ್ಕೆ ಅವಕಾಶ ಮಾಡಿಕೊಡುತ್ತೀರಾ?

ಶ್ರೀ ಆರ್. ಚೆನ್ನಿಗರಾಮಯ್ಯ.—ತಾಲ್ಲೂಕು ಹೆಡ್‌ಕ್ವಾರ್ಟರುಗಳಿಗೆ ಕೊಟ್ಟಿದೆ.

ಶ್ರೀ ಆಲೂರು ಹನುಮಂತಪ್ಪ.—ಯಾವ ಸಾಲದ ಅರ್ಜಿ ಆಗಲಿ ತಾಲ್ಲೂಕು ಹೌಸಿಂಗ್ ಸೊಸೈಟಿಯಲ್ಲಿ ಬಂದಿದ್ದು ಸರಿಯಾಗಿ ಪರಿಶೀಲನೆಮಾಡದೆ ಅದರಲ್ಲಿ ಅಕ್ರಮವಾದ ಕೆಲಸಕಾರ್ಯ ನಡೆಯುತ್ತಾ ಇದೆ ಎಂಬುದು ಸರ್ಕಾರದವರಿಗೆ ಗೊತ್ತಿದೆಯೇ?

ಶ್ರೀ ಆರ್. ಚೆನ್ನಿಗರಾಮಯ್ಯ.—ಸಂಸ್ಥಾನಕ್ಕೆಲ್ಲಾ ಹೌಸಿಂಗ್ ಕಾರ್ಪೊರೇಷನ್ ಎನ್ನುವುದು ಒಂದು ಇದೆ. ಅದಕ್ಕೆ ಲೋನ್ ಕೊಡುತ್ತೇವೆ. ಅವರು ಪ್ರೈಮರಿ ಸೊಸೈಟಿಗಳಿಗೆ ಡಿಸ್ಟ್ರಿಬ್ಯೂಟ್ ಮಾಡುತ್ತಾರೆ. ಅದರಲ್ಲಿ ಏನಾಗಿದೆ ಎಂಬುದು ನಮ್ಮ ನೋಟೀಸ್‌ಗೆ ಬಂದಿಲ್ಲ. ಬಹಳ ಅರ್ಜಿಗಳು ಬರುತ್ತವೆ, ಸಾಕಾದಷ್ಟು ಹಣ ಇಲ್ಲ. ಅದರಲ್ಲಿ ಎಲ್ಲರಿಗೂ ತೃಪ್ತಿಪಡಿಸುವುದಕ್ಕೆ ಆಗಿಲ್ಲ ಎಂದು ಗೊತ್ತಾಗಿದೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಕಡಮೆ ಉತ್ಪನ್ನ ಇರತಕ್ಕವರ ಮನೆಕಟ್ಟುವ ಸ್ಕೀಂನಲ್ಲಿ ಪಟ್ಟಣವಾಸಿಗಳಿಗೆ ಮಾತ್ರ ಸಾಲಕೊಟ್ಟು ಹಳ್ಳಿಯವರಿಗೆ ಕೊಡದೇ ಇರಲು ಕಾರಣವೇನು ಮತ್ತು ತೊಂದರೆಗಳೇನು?

ಶ್ರೀ ಆರ್. ಚೆನ್ನಿಗರಾಮಯ್ಯ.—ಈ ಸ್ಕೀಂ ಹಳ್ಳಿಗಳಿಗೆ ಅನ್ವಯವಾಗುವುದಿಲ್ಲ. ಅದಕ್ಕೆ ರೂರಲ್ ಹೌಸಿಂಗ್ ಸ್ಕೀಂ ಎಂದು ಬೇರೆ ಇದೆ.

Sri V. P. DEENADAYALU NAIDU.—Is it not a fact that the Government has not exhausted fully the amount that they have got from the Government of India last year under the Low Income Group Housing scheme?

Sri R. CHENNIGARAMAIAH.—The Government have fully exhausted the amount.

Promotion of Gramsevaks to Higher Posts in Bombay Karnatak.

Q.—3565. Sri J. L. KABADI (Indi).—Will the Government be pleased to state:—

(a) whether any Gramsevak belonging to Scheduled Caste has been promoted to a higher post in the Bombay Karnatak;

(b) if not, whether there are no fit candidates belonging to Scheduled Caste for promotion;

(c) the reasons for not following the Circulars and G.R.'s from the Central Government and the State Government in this behalf?

A.—Sri S. NIJALINGAPPA (Chief Minister).—

(a) No.

(b) There are three candidates who are not yet due for promotion.

(c) Does not arise.

ಶ್ರೀ ಜೆ. ಎಲ್. ಕಬಾಡಿ.—ಈ ಮೂರು ಜನರು ಯಾರ್ಯಾರು ಸ್ವಾಮಿ?

ಅಧ್ಯಕ್ಷರು.—ಹೆಸರು ಏಕೆಬೇಕು ನಿಮಗೆ? ಅವರು ಎಷ್ಟುಜನ ಎಂದು ಹೇಳಿದ್ದಾರೆ, ಹೆಸರುಬೇಕಾಗಿಲ್ಲ.

ಶ್ರೀ ಜೆ. ಎಲ್. ಕಬಾಡಿ.—ಅವರಿಗೆ ಬಡ್ತಿಕೊಡಬೇಕಾದರೆ ಎಷ್ಟುದಿವಸಬೇಕು?

*ಶ್ರೀ ರಾಮಕೃಷ್ಣ ಹೆಗ್ಗಡೆ.—ನಿರ್ಧಾರವಾಗಿ ಹೇಳಲಿಕ್ಕೆ ಬರುವುದಿಲ್ಲ. ಯಾವಾಗ ಪ್ರಮೋಷ್ ಡ್ಯೂ ಆಗುತ್ತದೆಯೋ ಆಗ ಮಾಡುತ್ತೇವೆ.

ಶ್ರೀ ಜೆ. ಎಲ್. ಕಬಾಡಿ.—ಅರ್ಹರಾಗಿದ್ದರೂ ಒತ್ತಿ ಕೊಟ್ಟಿಲ್ಲ ಎಂದು ಕೇಳುತ್ತೇನೆ. ಏಕೆ ಕೊಟ್ಟಿಲ್ಲ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅರ್ಹರಿದ್ದರೂ ಕೊಡಲಿಲ್ಲ ಎಂದು ಅಲ್ಲ. ಬೊಂಬಾಯ್ ಕರ್ನಾಟಕದಲ್ಲಿ ಕೇವಲ ಮೂರು ಜನ ಷೆಡ್ಯೂಲ್ ಕ್ಯಾಸ್ಟ್‌ಗೆ ಸೇರಿದ ಗ್ರಾಮಸೇವಕರು ಇದ್ದರು. ಅವರು ಇನ್ನೂ ಬಡ್ತಿಗೆ ಅರ್ಹರಾಗಿಲ್ಲ.

Dr. R. NAGAN GOWDA.—What are their qualifications?

Sri RAMAKRISHNA HEGDE.—Matriculation with agricultural training.

ಶ್ರೀ ಜೆ. ಎಲ್. ಕಬಾಡಿ.—ಈ ಮೂರು ಜನ ಉಮೇದುವಾರರು ಯಾವ್ಯಾವ ಜಿಲ್ಲೆಯಿಂದ ಬಂದವರಾಗಿದ್ದಾರೆ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಎರಡು ಜನ ಸಿಂದಗಿ ಎಕ್. ಇ. ಎಸ್.ಗೆ ಸೇರಿದವರು, ಇನ್ನೊಬ್ಬರು ಅಥಣಿ ಎಕ್. ಇ. ಎಸ್. ಗೆ ಸೇರಿದವರು.